'ಈ ಥರ ನೀನು ಕದ್ಕಂಡು ಬಂದು ಸಿಕ್ಕಾಕಂಡ್ರೆ' ಅಂದು ಕೇಳುತ್ತಿದ್ದೆ. ನಾನು ತಿನ್ನುವುದನ್ನೇ ಅಪರೂಪದ ದೃಶ್ಯವೆಂಬಂತೆ ನೋಡುತ್ತ ತಂದು ತಿನ್ನಿಸಿದಷ್ಟಕ್ಕೇ ಏನೋ ಸಾಧಿಸಿದವಳಂತೆ ಮೈಮರೆಯುತ್ತ ನಿಂತವಳು ಬಹಳ ಹೊತ್ತಿನ ಮೇಲೆ ನಾನು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಿದ್ದಳು. ಅದು ಅವಳಿಗೇ ತಿನ್ನಲು ಕೊಟ್ಟದ್ದು ಎಂದು. ಹೀಗೆ ಎಷ್ಟೋ ಹೊತ್ತು ಅದೂ ಇದೂ ಮಾತಾಡುತ್ತಿದ್ದ ಮಾದೇವಿ ಅಪ್ಪ ಅಮ್ಮ ಮೇಷ್ಟ್ರು ಯಾರು ಹೊಡೆದರೂ ನಾನೊಬ್ಬ ಇರುವುದರಿಂದ ಕಾಡಿಗೆ ಹೋಗಿ ತಾನು ಕರಡಿಯ ಕೈಗೆ ಸಿಕ್ಕಿಕೊಳ್ಳುವುದಿಲ್ಲವೆಂದು ನಿರ್ಧರಿಸುತ್ತಿದ್ದಳು.

ಒಟ್ಟಿನಲ್ಲಿ ಮಾದೇವಿ, ಮನೆಯಲ್ಲಿ ಮೂರ್‍ನಾಲ್ಕು ಜನ ಅಕ್ಕತಂಗಿಯರು, ನಾಲ್ಕೈದು ಜನ ಅಣ್ಣ ತಮ್ಮಂದಿರು ಹೀಗೆ ಒಂಬತ್ತು ಮಕ್ಕಳ ನಡುವೆ ಹುಟ್ಟಿ ಬೆಳೆದವಳು. ತನ್ನನ್ನು ಪ್ರೀತಿಸುವ ಯಾವುದಾದರೂ ಒಂದು ಜೀವಕ್ಕಾಗಿ ಹುಡುಕುತ್ತಿದ್ದಳು. ಹೀಗಿರುವಾಗ ಊರ ಹಿರೀಕರಲ್ಲಿ ಒಬ್ಬರಾದ ಸಣ್ಣ ಬಸಪ್ಪನವರ ಮಗ ವಿರೂಪಾಕ್ಷಯು ತಾನು ಪ್ರೀತಿಸುವುದಾದರೆ, ಲಗ್ನವಾಗುವುದಾದರೆ ಮಾದೇವಿಯನ್ನೇ ಎಂದುಕೊಂಡು ಶಾಲೆಯಲೆಲ್ಲ ಸುದ್ದಿ ಮಾಡಿದ. ಇನ್ನು ಊರಲ್ಲಿದ್ದರೆ ತನ್ನ ಯೋಚನೆಗೆ ಅಪ್ಪ ಅವ್ವಂದಿರೋ ಇಲ್ಲ ಬಂಧುಬಳಗದವರೋ ಅಡ್ಡಬರಬಹುದೆಂದು ವಿರೂಪಾಕ್ಷಿ ಹೈಸ್ಕೂಲು ಮುಗಿದು ರಜೆ ಆರಂಭವಾಗುವ ವೇಳೆಗೆ ಮಾದೇವಿಯನ್ನು ಕರೆದುಕೊಂಡು ಊರುಬಿಟ್ಟ.

ಹಾಗೆ ವಿರೂಪಾಕ್ಷಿ ಊರು ಬಿಡುವಾಗ್ಗೆ ಮನೆಯಿಂದ ಒಂದೆರೆಡು ಚಿನ್ನದ ಸರ. ಅಕ್ಕಂದಿರ ನಾಲ್ಕೈದು ಸೀರೆ, ಎರಡು ಮೂರು ಸಾವಿರ ರೂಪಾಯಿ ಇಷ್ಟೆಲ್ಲ ಲಪಟಾಯಿಸಿಕೊಂಡು ಹೊರಟಿದ್ದ. ಪೇಟೆ ಕಡೆಯ ಬಸ್ಸಿನಲ್ಲಿ ಹೋಗುವಾಗ್ಗೆ ಮಾದೇವಿ ಅಳುಮುಖ ಹಾಕಿ, ಅಪ್ಪ ಅವ್ವನನ್ನು ಬಿಟ್ಟು ಬರಲು ಭಯವಾಗುತ್ತಿದೆ. ನಿನ್ನಂಥ ಸಿರಿವಂತರ ಮಗನೆಲ್ಲಿ, ನಾನೆಲ್ಲಿ, ಆನೆಗೂ ಆಡಿಗೂ ಯಾವ ಸಂಬಂಧ? ನನ್ನ ವಾಪಸು ಕಳಿಸಿಬಿಡು. ನೀನು ಊರು ಸೇರಿ ನಿನ್ನಂತೆಯೇ ಉಳ್ಳಾದವರ ಮನೆಯಲ್ಲಿ ಲಗ್ನವಾಗಿ ಚೆನ್ನಾಗಿರು ಎಂದು ಗೋಗರೆದಳಂತೆ. ವಿರೂಪಾಕ್ಷಿಯಿದ್ದು, ತಾನು ಬೇರೆಯವಳನ್ನು ಮದುವೆಯಾಗುವ ಮಾತು ಹಾಗಿರಲಿ, ನಿನ್ನ ನನ್ನ ಲಗ್ನಕ್ಕೆ ಅಡ್ಡ ಬಂದವರು ಅವರು ಅಪ್ಪ ಅವ್ವಂದಿರೇ ಆಗಿರಲಿ ಕೊಂದುಬಿಡುವೆನೆಂದ. ಜತೆಗೆ ಪೇಟೆಯಲ್ಲಿ ಕೂಲಿಯಾದರೂ ಮಾಡಿ ನಂಬಿ ಬಂದವಳನ್ನು ಸಾಕುವುದಾಗಿ ಹೇಳಿದ.

ಮಾದೇವಿಗೆ ವಿರೂಪಾಕ್ಷಿ ಆಡುತ್ತಿದ್ದ ಮಾತುಗಳೆಲ್ಲ ಸರಿಯಾಗಿ ಅರ್ಥವಾಗದಿದ್ದರೂ, ಇವನು ತನ್ನನ್ನು ಅದೆಷ್ಟು ಪ್ರೀತಿಸುತ್ತಿರುವನು ಅಂದುಕೊಂಡಳು. ಪೇಟೆಯಲ್ಲಿ ಬಸ್ಸು ಇಳಿಯುತ್ತಿರುವಾಗ್ಗೆ ಮಾದೇವಿ, ಏನೇ ಆಗಲಿ ನಾನು ತಾಯಿ ತಂದೆ ಬಿಟ್ಟು ನಿನ್ನೊಂದಿಗೆ ಓಡಿ ಬಂದಿರುವೆ. ಇನ್ನು ನನಗೆ ನೀನೊಬ್ಬನೇ ದಿಕ್ಕು. ಬಡವಳಾದ ತನಗೆ ಹಾಲಿನಲ್ಲಿ ಕೈ ತೊಳೆಸುವುದೇನೂ ಬೇಕಿಲ್ಲ, ನೀರಲ್ಲಿ ಮಾತ್ರ ಮುಳುಗಿಸಬೇಡ ಅಂದು ಕಣ್ಣೊಳಗೆ ನೀರು ತಂದು ಕೇಳಿದಳು. ವಿರೂಪಾಕ್ಷಿಯಾದರೋ ನೀನು ಬಡವಳೇ ಅಲ್ಲ, ನನ್ನ ರಾಣಿ ಎನ್ನುತ್ತ ಕರೆದುಕೊಂಡು ಹೋಗಿ ಹೋಟೆಲೊಂದರಲ್ಲಿ ರೂಮು ಮಾಡಿ ಉಳಿದುಕೊಂಡ.

ಕೈಕಾಲು ಅಳತೆಯ ಆ ರೂಮೊಳಗೆ ಪ್ರೇಮಿಗಳಿಬ್ಬರೂ ಹತ್ತಾರು ದಿನಗಳ ಕಾಲ ಒಂದು ಮಿನಿಟೂ ಅಗಲದೆ ಗಾಢವಾಗಿ ಪ್ರೀತಿಸಿದರು. ಆ ಸಮಯದಲ್ಲೆಲ್ಲ ವಿರೂಪಾಕ್ಷಿ ತಾನು ಮಾದೇವಿಯೊಂದಿಗೆ ಇಂಥ ಸಣ್ಣ ರೂಮಿನಲ್ಲಿದ್ದರೂ ಅರಮನೆಯಲ್ಲಿದ್ದಂತೆಯೇ ಭಾಸವಾಗುತ್ತಿದೆ. ಆಕಾಶ ನೆಲ ಎತ್ತ ತಿರುಗಿದರೂ ಮಾದೇವಿ ಬಿಟ್ಟು ಬೇರಾರು ಕಾಣಿಸುತ್ತಿಲ್ಲ